# <u>ಬೃಹತ್ ಬೆಂಗಳೂರು ಮಹಾನಗರ ಪಾಲಿಕೆÉ</u>

**ಸಂಖ್ಯೆ:ಕಂ.ಅ/ಜ.ನ/ಪಿಆರ್/W-171/2022-23** **ಕಂದಾಯ ಅಧಿಕಾರಿ ರವರ ಕಛೇರಿ,**

**1ನೇ ಮಹಡಿ, ಜಯನಗರ**

**ವಾಣಿಜ್ಯ ಸಂಕೀರ್ಣ**

**4ನೇ ಬ್ಲಾಕ್ ಜಯನಗರ**

**ಬೆಂಗಳೂರು,**

**ದಿ:08.11.2022**

-: ಸಭೆಯ ನಡವಳಿಗಳು :-

ವಿಷಯ:- ವಾರ್ಡ್ ಸಂಖ್ಯೆ-171-ಗುರಪ್ಪನಪಾಳ್ಯ ವಾರ್ಡ್ ಸಮಿತಿ ಸಭೆ, ದಿನಾಂಕ:- 05.06.2021 ನಡಾವಳಿ

ಉಲ್ಲೇಖ:- 1. ವಾರ್ಡ್ ಕಮಿಟಿ ನೋಡಲ್ ಅಧಿಕಾರಿಗಳನ್ನು ನೇಮಿಸಿರುವ ಪರಿಷ್ಕೃತ ಕಛೇರಿ ಆದೇಶ

ಸಂಖ್ಯೆ:ಬಿ12(5)ಪಿಆರ್/35/20-21 ದಿನಾಂಕ:16.04.2021.

2. ಸರ್ಕಾರದ ಆದೇಶ ಸಂಖ್ಯೆ:RD158TNR 2020(1) ದಿನಾಂಕ:07.05.2021.

3. ಜಂಟಿ ಆಯುಕ್ತರು ದಕ್ಷಿಣ ಸಭಾ ಸೂಚನ ಪತ್ರದ ಸಂಖ್ಯೆ:

ಜಂ.ಅ(ದ)/ಪಿ.ಆರ್/07/2022-23 ದಿನಾಂಕ:07.04.2022.

***********

ದಿನಾಂಕ:15.10.2022, ರಂದು ಬೆಳ್ಳಿಗೆ 11.00 ಗಂಟೆಗೆ ವಾ-171-ಗುರಪ್ಪನಪಾಳ್ಯ ವ್ಯಾಪ್ತಿಯಲ್ಲಿ ವಾರ್ಡ್ ಸಮಿತಿಯ ಸಭೆಯನ್ನು ನೋಡೆಲ್ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಹಾಯಕ ಅಭಿಯಂತರರ ವಾರ್ಡ್ ಕಛೇರಿ ಮಾರುತಿ ಬಡಾವಣೆಯಲ್ಲಿ ನಡೆಸಲಾಯಿತು, ಅಧ್ಯಕ್ಷರು ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರುಗಳನ್ನು ಹಾಗೂ ವಿವಿಧ ಇಲಾಖೆಯ ಪ್ರತಿನಿಧಿಗಳನ್ನು ಸ್ವಾಗತಿಸುತ್ತಾ, ಸದಸ್ಯ ಕಾರ್ಯದರ್ಶಿಯವರಿಗೆ ಈ ಹಿಂದಿನ ಸಭೆಯ ಅನುಸರಣಾರವಧಿಯನ್ನು ಮಂಡಿಸಲು ಸೂಚಿಸಿದು. ಅದರಂತೆ ಸದಸ್ಯ ಕಾರ್ಯದರ್ಶಿಗಳು ಅನುಸರಣಾವರಧಿಯನ್ನು ಈ ಕೆಳಕಂಡಂತೆ ಮಂಡಿಸಿದೆ:

1. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಎಲ್ಲಾ 198 ವಾರ್ಡ್ ಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಲಾಗಿರುತ್ತದೆ. ಈ ಹಿಂದೆ ಸಭೆಯಲ್ಲಿ ತೀರ್ಮಾನಿಸಿದಂತೆ ಬನ್ನೇರುಘಟ್ಟ ಮುಖ್ಯರಸ್ತೆ

ಬಿಸ್ಮಿಲ್ಲಾನಗರ ಮುಖ್ಯರಸ್ತೆ, 8ನೇ ಮುಖ್ಯರಸ್ತೆ, ವೆಂಟ್ಸ್ಗಳನ್ನು ತೆರೆಯಲಾಗಿದ್ದು ಸದರಿ ಪ್ರಕ್ರಿಯೆಯು ಚಾಲ್ತಿಯಲ್ಲಿರುತ್ತದೆ.

2. ಪಾದಚಾರಿ ಮಾರ್ಗದಲ್ಲಿ ವ್ಯಾಪಾರ ವಹಿವಾಟು ನಡೆಯದಂತೆ ನೋಡಿಕೊಳ್ಳಬೇಕೆಂದು ಪಾದಚಾರಿ ಮಾರ್ಗ (ಫುಟ್‌ಪಾತ್)ನ್ನು ತೆರವುಗೊಳಿಸುವ ಕಾರ್ಯಕ್ರಮ ಪ್ರಾರಂಭಗೊಂಡಿದ್ದು ಪ್ರಗತಿಯಲ್ಲಿರುತ್ತದೆ.
3. ಬೀದಿ ದೀಪಗಳ ನಿರ್ವಹಣೆ ಕಾರ್ಯವು ಪ್ರಾರಂಭಿಸಲಾಗಿದ್ದು ಪ್ರಗತಿಯಲ್ಲಿರುತ್ತದೆ, ಮಾನ್ಯ ಆಯುಕ್ತರು ಹಾಗೂ ಮಾನ್ಯ ಆಡಳಿತಾಧಿಕಾರಿ ನಿರ್ದೇಶನದಂತೆ ಅಕ್ಟೋಬರ್ 15 ರಂದು ಬೆಳಿಗ್ಗೆ 07.30 ರಿಂದ 10.30 ಗಂಟೆಯವರೆಗೂ ಬನ್ನೇರುಘಟ್ಟ ಮುಖ್ಯರಸ್ತೆ, ಬಿಸ್ಮಿಲ್ಲಾನಗರ ಹಾಗೂ ಮಾರುತಿ ಬಡಾವಣೆಗಳಲ್ಲಿ ಬಹುತೇಕ ಎಲ್ಲಾ ಇಲಾಖೆಗಳ ಸಹಕಾರರದಿಂದ ಬೀದಿ ದೀಪಗಳ ನಿರ್ವಹಣೆ ವಿಭಾಗ ಘನತ್ಯಾಜ್ಯ ವಿಭಾಗದ ಸಂಪೂರ್ಣ ಹಾಗೂ ಕಾಮಗಾರಿ ಇಲಾಖೆಯವರು ಸಂಪೂರ್ಣವಾಗಿ ಪಾಲ್ಗೊಳ್ಳುವುದರೊಂದಿಗೆ ಸ್ಥಳೀಯ RWAS ಈ ದಿನದ ಸಭೆಯಲ್ಲಿ ಮತ್ತು ನಾಗರೀಕರ ಹಾಗೂ ಸಭೆಯ ಸಸದಸ್ಯರನೊಳ್ಳಗೊಂಡಂತೆ ಉತ್ತಮವಾಗಿ ಇಂಟೆನ್ಸೀವ್ ಕ್ಲೀನಿಂಗ್ ಕಾರ್ಯವನ್ನು ನಡೆಸಲಾಯಿತು.
4. ಕಸ ವಿಭಜನೆ ಸ್ಥಳವನ್ನು ಸ್ಥಳಾಂತರಿಸಲಾಗಿದೆ.
5. ಶೋಭ ಮ್ಯಾಗ್ನೋಲಿಯ ಅಪಾರ್ಟ್ಮೆಂಟ್ ಸುತ್ತಮುತ್ತ ಇರುವ ಕಸವನ್ನು ಸ್ವಚ್ಛಗೊಳಿಸಲಾಗಿದೆ.
6. ಮಳೆ ಪರಿಹಾರಕ್ಕೆ ಸಂಬಂಧಪಟ್ಟ ಕಡತಗಳು ಮಾನ್ಯ ವಲಯ ಜಂಟಿ ಆಯುಕ್ತರರವರಗೆ ಕೂಡಲೇ ಸಲ್ಲಿಸಲು ಆದೇಶಿಸಿದೆ.
7. ಡ್ರಕ್ಸ್ ಟ್ರಾಫೀಕಿಂಗ್ ಬಗ್ಗೆ ಪರಿಶೀಲಿಸಿ ವರದಿಯನ್ನು ಸಲ್ಲಿಸಲು ASI & PSI ಸುತಗುಂಟೆಪಾಳ್ಯ ರವರಗಳಿಗೆ ತಿಳಿಸಲಾಯಿತು.
8. ಕಸ ವಿಲೇವಾರಿ ಹಾಗೂ Seggregation ಸ್ಥಳವನ್ನು ನಿಯೋಜಿಸಲಾಯಿತು.
9. ಪಿ.ಕೆ.ಗಳಿಗೆ 2 ಸುವಿಧಾ ಕೇಂದ್ರಗಳನ್ನು ನಿಯೋಜಿಸಲಾಯಿತು.
10. Fogging and Spraying ಯನ್ನು ಪ್ರತಿದಿನ ಮಾಡಿಸಲಾಗಿದೆ.

**<u>17.06.2022 ಸಭೆಗೆ ಹಾಜರಿದ್ದ ವಾರ್ಡ್ ಸಮಿತಿ ಅಧಿಕಾರಿಗಳು, ಸದಸ್ಯರು ಹಾಗೂ ಆರ್-:ಎ.ಡಬ್ಲ್ಯೂ.</u>**

1. ಶ್ರೀಮತಿ. ಎಚ್.ಗುಲ್ತಾಜ್ ಫಾತೀಮ – ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು.

2. ಶ್ರೀ. ಮಹಬೂಬ್ ಖಾನ್ – ಕಾರ್ಯದರ್ಶಿ.
3. ಶ್ರೀ. ಇಬ್ರಾಹಿಂ – ಕೆಲಸ ಪರಿವೀಕ್ಷಕರು ವಾರ್ಡ್-171
4. ಶ್ರೀ. ಹರ್ಷ. ವಿ - ಕಿರಿಯ ಅಭಿಯಂತರರು (BWSSB)
5. ಶ್ರೀಮತಿ. ಆಶಾ ಎಸ್ - ಸಹಾಯ ಕಾರ್ಯನಿರ್ವಹಕ ಅಭಿಯಂತರರು (BESCOM)
6. ಶ್ರೀ.ಎಂ.ಪರಮೇಶ್ವರ – ಕಿರಿಯ ಅಭಿಯಂತತರು (BESCOM)
7. ಶ್ರೀ. ಗೌತಮ್ – ಕಿ.ಆ.ಪ.- ವಾರ್ಡ್-171
8. ಶ್ರೀ. ಯಶ್ವಂತ್- ಸೂಪರ್‌ವೈಸರ್, 9972601205
9. ಶ್ರೀ ಕುಮಾರ್ – ವಾರ್ಡ್ ಸೂಪರ್‌ವೈಸರ್
10. ಶ್ರೀ ಸಚಿನ್ ಕುಮಾರ್ - ಹಿ.ಅ.ಪ.ವಾರ್ಡ್ 171
11. ಶ್ರೀ. ತಿಪ್ಪಯ್ಯ - ವಾರ್ಡ್ ಸೂಪರ್‌ವೈಸರ್
12. ಶ್ರೀ ರಮೇಶ್ – ವಾರ್ಡ್ ಸೂಪರ್‌ವೈಸರ್
13. ಶ್ರೀ. ಗಿಲ್ಬರ್ಟ್ - ಸ್ಥಳೀಯ ನಾಗರೀಕರು
14. ಸಯೆದ್ ಖಾಜ - ಸ್ಥಳೀಯ ನಾಗರೀಕರು
15. ಶ್ರೀ. ನಜೀರ್ - ಸ್ಥಳೀಯ ನಾಗರೀಕರ
16. ಶ್ರೀಮತಿ. ನಸೀಮ - ಸ್ಥಳೀಯ ನಾಗರೀಕರು
17. ಶ್ರೀ.ಶ್ರೀನಿವಾಸ್ – Shobha Magnolia Welfare Association Member
18. ಶ್ರೀ. ಶ್ರೀಧರ್ – Shobha Magnolia Welfare Association Member
19. ಶ್ರೀ ನವೀನ್ ಕುಮಾರ್ – ವಾರ್ಡ್ 171 ಮಾರ್ಷಲ್.
20. ಶ್ರೀ.ವೆಂಕಟೇಶ್ ಬಾಬು - ಪೋಲಿಸ್ ಪೇದೆ ಮೈಕೊ ಲೇಔಟ್, ಪೋಲೀಸ್ ಠಾಣೆ.

ನಂತರ ವಾರ್ಡ್ ಕಮಿಟಿಯ ಅಧ್ಯಕ್ಷರು ಕರ್ನಾಟಕ ಮುನಿಸಿಪಲ್ ಕಾರ್ಪೊರೇಶನ್ ಕಾಯ್ದೆ 1976ರ ಕಲಂ13(H) ಅಡಿ ವಾರ್ಡ್ ಸಮಿತಿಗಳನ್ನು ರಚಿಸಿ, ಚುನಾಯಿತ ವಾರ್ಡ್ ಸದಸ್ಯರು ಕರ್ನಾಟಕ ಮುನಿಸಿಪಲ್ ಕಾರ್ಪೊರೇಶನ್ ಕಾಯ್ದೆ 1976ರ ನಿಯಮ 70 ರಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ಸದರಿ ಚುನಾಯಿತ ಪ್ರತಿನಿಧಿಗಳ ಅಧಿಕಾರ ಅವಧಿಯು ದಿನಾಂಕ:10.09.2020ಕ್ಕೆ ಮುಕ್ತಾಯವಾಗಿದ್ದು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಹಾಗೂ ಸಾರ್ವಜನಿಕರ ನಡುವೆ ಸಮನ್ವಯ ಸಾಧಿಸಲು ಮಾನ್ಯ ಆಯುಕ್ತರು, ಬಿ.ಬಿ.ಎಂ.ಪಿ ರವರು ಕಚೇರಿ ಆದೇಶ ಸಂಖ್ಯೆ:ಬಿ12(5)/ಪಿ.ಆರ್/35/2020-21, ದಿನಾಂಕ:21.09.2020 ರಂತೆ ವಾರ್ಡ್ ಗಳಿಗೆ ನೋಡಲ್ ಅಧಿಕಾರಿ ರವರನ್ನು ನೇಮಿಸಿರುತ್ತಾರೆ. ಹಾಗೂ

ಕೈಗೊಳ್ಳಬೇಕಾಗಿರುವ ಕೆಲಸ ಕಾರ್ಯಗಳು ಹಾಗೂ ಸಮಿತಿಯನ್ನು ರಚಿಸುವುದರ ಬಗ್ಗೆ ತಿಳಿಸಿರುತ್ತಾರೆ.

ವಾರ್ಡ್ ಸಮಿತಿಯು ಪ್ರತಿ ಮಾಹೆಯ 1ನೇ ಹಾಗೂ 3ನೇ ಶನಿವಾರದಂದು ಅಥವಾ ಆ ದಿನದಲ್ಲಿ ಸಾರ್ವಜನಿಕ ರಜೆ ಇದ್ದರೆ ಅದರ ಮುಂದಿನ ದಿನಾಂಕದಂದು ಸಭೆ ನಡೆಸಲಾಗುವುದೆಮದು ಹಾಗೂ ತಿಂಗಳಲ್ಲಿ ಎರಡು ಬಾರಿ ಆಯೋಜಿಸಲು sಸೂಚಿಸಿರುವುದರಿಂದ 1ನೇ ಶನಿವಾರ ಹಾಗೂ 3ನೇ ಶನಿವಾರದಂದು ಸಭೆಯು ನಡೆಯುವಂತೆ ನೋಡಿಕೊಳ್ಳುವುದು, ತುರ್ತು ಪರಿಸ್ಥಿತಿಯಲ್ಲ/ ರಜಾದಿನಗಳಲ್ಲಿ ಸಭೆಯನ್ನು ಆಯೋಜಿಸಿದರೆ ಸಭೆಯ ದಿನಾಂಕವನ್ನು ಮುಂಚಿತವಾಗಿ ತಿಳಿಸಲಾಗುವುದೆಂದು ಸಭೆಗೆ ತಿಳಿಸಿ, ಸಭೆಯನ್ನು ಮುಂದುವರೆಸಲು ಸೂಚನೆ ನೀಡಿದ ನಂತರ, ಸಭೆಯನ್ನು ಆರಂಭಿಸಲಾಯಿತು.

**<u>ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದ ವಿಷಯಗಳು:-</u>**

<table>
<tr><th>ಕ್ರ.ಸಂ</th><th colspan="2">ಮಾಹಿತಿ</th></tr>
<tr><td>I</td><td colspan="2">ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ</td></tr>
<tr><td colspan="3">i. ಘನತ್ಯಾಜ್ಯ ನಿರ್ವಹಣೆ (SWM)</td></tr>
<tr><td colspan="2">ಗುರಪ್ಪನಪಾಳ್ಯ ಬಿಸ್ಮಿಲ್ಲನಗರ ಮೈಕೊಲೇಜೌಟ್ ಬಿ.ಟಿ.ಎಂ. 1ನೇ ಹಂತ, ಮತ್ತಿತರ ಕಡೆಗಳಲ್ಲಿ ಕಸ ವಿಲ್ಲೇವಾರಿಯನ್ನು ಸಮರ್ಪಕವಾಗಿ ನಿರ್ವಹಿಸುವ ಬಗ್ಗೆ ಹಾಗೂ ಗುರಪ್ಪನಪಾಳ್ಯ ಮಾರ್ಕೆಟ್‌ನಲ್ಲಿ ಸ್ವಚ್ಛತಾ ಕಾರ್ಯಕ್ರಮವನ್ನು ಇದೇ ತಿಂಗಳು ಬುಧವಾರದಂದು ನಡೆಸಲು ಹಾಗೂ ಧೈನಂದಿನ ಕಸ ವಿಲೇವಾರಿ ಮಾಡಲು ನಿರ್ಧರಿಸಲಾಯಿತು</td><td rowspan="2">ಕಿರಿಯ ಆರೋಗ್ಯ ಪರಿವೀಕ್ಷಕರು:<br>*2 ದಿವಸಗಳೊಳಗಾಗಿ ಬ್ಲಾಕ್ ಸ್ಪಾಟ್‌ಗಳನ್ನು ತೆಗೆಯುವುದು / ಸ್ವಚ್ಛಗೊಳಿಸುವುದು<br>*ಬುದುವಾರದ ಸಾಮೂಹಿಕ ಸ್ವಚ್ಛತಾಕಾರ್ಯಕ್ರಮಕ್ಕೆ ಅವಶ್ಯಕವಿರುವ ಸಿದ್ಧತೆಗಳನ್ನು ಹಾಗೂ ಮಾಹಿತಿ ವಿನಿಮಯವನ್ನು ಸಹಾಯಕ ಕಾರ್ಯಪಾಲಕರು ಮಾಡುವುದು</td></tr>
<tr><td colspan="2">ಶೋಭಾ ಮ್ಯಗನೋಲಿಯ ಸುತ್ತ ಮುತ್ತಲು ಸ್ವಚ್ಚತೆಯನ್ನು ಕಾಪಾಡಲು ಸ್ಥಳಿಯರು ಕೋರಿರುವ ಮೇರೆಗೆ ಸ್ವಚ್ಚತೆಯನ್ನು ಕಾಪಾಡಿ, No Parking Boardಗಳನ್ನು ಸಹ ಅಳವಡಿಸಲು ತಿಳಿಸಿರುತ್ತಾರೆ.</td></tr>
<tr><td colspan="3">ii. ಆರೋಗ್ಯ ಇಲಾಖೆ (Health Department)</td></tr>
</table>

| | |
|---|---|
| ಬೀದಿಬದಿ ವ್ಯಾಪಾರಿಗಳ ಸ್ವಚ್ಛತೆಯನ್ನು ಕಾಪಾಡಲು ಕ್ರಮವಹಿಸುವುದು ಹಾಗೂ ಬೀದಿಗಳಲ್ಲಿ Disinfecting or Sanitizing ಮಾಡಲು ಸೂಚಿಸಲಾಯಿತು | ಆರೋಗ್ಯ ವೈದ್ಯಾಧಿಕಾರಿ ಮೈಕೊಲೇಜೌಟ್ ಹಾಗೂ ತಾವರೆಕೆರೆ ರವರಿಗೆ ಪತ್ರ ಪ್ರತ್ಯೇಕವಾಗಿ ಪತ್ರ ಬರೆಯ.ಉ ತಿಳಿಸಲಾಯಿತು |
| ಶ್ರೀ ಡಿ.ವಿ ಸುರೇಶ್ ಅರೋಗ್ಯ ವೈಧ್ಯಧಿಕಾರಿಗಳಿಗೆ ಪ್ರಾಥಮಿಕ ಆರೋಗ್ಯ ಆಸ್ಪತ್ರೆಗೆ ಸುಮಾರು ಹೆಣ್ಣು ರೋಗಿಗಳು ಬರುತ್ತಾರೆ ಆದ್ದರಿಂದ ತಾವರೆಕೆರೆ ಪಿ.ಹೆಚ್.ಸಿ ಸೆಂಟರ್‌ಗೆ ಒಂದು Lady gynecologist ನೇವಿಸಲು ಸೂಚಿಸಿರುತ್ತಾರೆ. | ಆರೋಗ್ಯ ವೈಧ್ಯಾಧಿಕಾರಿ ಜಯನಗರ ವಿಭಾಗ. |
| **iii. ಬೀದಿ ದೀಪಗಳ ನಿರ್ವಹಣೆ (Street Lights) / Electrical9** | |
| ಗುರಪ್ಪನಪಾಳ್ಯ ಹಾಗೂ ಬಿಸ್ಮಿಲ್ಲನಗರದ ಹೆಚ್ ಕ್ರಾಸ್‌ನಲ್ಲಿ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ಬೀದಿ ದೀಪ ಹಾಗೂ ಎಲ್.ಇ.ಡಿ ದೀಪಗಳು ನಿರ್ವಹಣೆ ಬಗ್ಗೆ ಪ್ರತ್ಯೇಕವಾಗಿ ಪಟ್ಟಿ ಮಾಡಿ ಸಭೆಯಲ್ಲಿ ಸ್ಥಳಿಯರು ಕ್ಷೇಮಾಭಿವೃದ್ದಿ ಸಂಘದವರು ಸಲ್ಲಿಸಿ ಕೂಡಲೇ ಕ್ರಮ ಕೈಗೊಳ್ಳಲು ಕೋರಿದರು. ಅದಕ್ಕೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿರವರು ಮಾತನಾಡಿ ಇಡೀ ವಾರ್ಡಿನಲ್ಲಿ ಬೀದಿ ದೀಪಗಳ ಸರ್ವೆ ಮಾಡಿ ಸರಿಪಡಿಸುವುದು ಹಾಗೂ ಬೆಳಕು ಚೆಲ್ಲುವುದನ್ನು ತಡೆಯುವ ಚಿಕ್ಕ ಚಿಕ್ಕ ಮರದ ರೆಂಬೆಗಳನ್ನು ಕಡೆದು ತಕ್ಷಣ ಆ ಕಡೆದ ರೆಂಬೆಗಳನ್ನು ಸಾಗಾಣಿ ಮಾಡಬೇಕೆಂದು ಸಭೆಯಲ್ಲಿ ಹಾಜರಿದ್ದ ಸಂಬಂಧಿಸಿದ ಇಲಾಖಾ ಅಧಿಕಾರಿಗಳಿಗೆ ಹಾಗೂ ಗುತ್ತಿಗೆದಾರರಿಗೆ ಕಟ್ಟು ನಿಟ್ಟಾಗಿ ಸೂಚಿಸಿದರು ಹಾಗೂ ಅಶ್ವಥಕಟ್ಟೆ ಮತ್ತು ಇಲ್ಲಿ ಬೀದಿ ದೀಪಗಳನ್ನು ದುರಸ್ತಿ ಪಡಿಸಲು ಕೇಳಿರುತ್ತಾರೆ. ಹಾಗೂ Electric Bulb ಗಳನ್ನು ಮುಂಜಾನೆ 7.00 ಗಂಟೆವರೆಗು ಉರಿತಯಿರುವುದು ಗಮನಿಸಲಾಗಿದು ಇದನ್ನು ತಡ ಹಿಡಿಯಲು ನೋಡಲ್<br>ವಾರ್ಡ್ನಲ್ಲಿ ಎಲ್ಲಾ ಸಿಸಿಟಿವಿ ಕ್ಯಾಮರಗಳನ್ನು ಸರಿಪಡಿಸಲು ಹಾಗೂ ವಿಧ್ಯುತ್ ಧ್ವೀಪಗಳನ್ನು ಸರಿಪಡಿಸಲು ಸಹ ಸೂಚಿಸಿರುತ್ತರೆ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬೇಸ್ಕಾಂ) ಹಾಗೂ ಸಂಬಂಧಿಸಿದ ಗುತ್ತಿಗೆದಾರು ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯೂತ್) ಬಿಬಿಎಂಪಿ |
| **II. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB)** | |

| | | |
|---|---|---|
| 1 | ➢ ಹಳೇಯ UCOಬ್ಯಾಂಕ್ ಮತ್ತು Total Gas Station ಮುಖ್ಯ ರಸ್ತೆಯ ಸಮಾನಂತರ ರಸ್ತೆಯಲ್ಲಿನ ಇತ್ತಿಚೆಗೆ ರಸ್ತೆಯನ್ನು ಅಗೆದು ದೊಡ್ಡಗಾತ್ರದ ಪೈಪ್‌ಲೈನ್‌ಗಳನ್ನು ಅಳವಡಿಸಿರುವ ಭಾಗಕ್ಕೆ ರಸ್ತೆಗೆ ಜಲ್ಲಿಯನ್ನು ಹಾಕಿ ರೋಲರ್‌ನಿಂದ ಸಮ ಮಟ್ಟ ಮಾಡದೇ ಹಾಗೇ ಬಿಟ್ಟಿರುವುದರಿಂದ ಇತ್ತಿಚಿನ ಬಾರಿ ಮಳೆಗೆ ಹಳ್ಳಗಳು ನಿರ್ಮಾಣವಾಗಿದ್ದು ರಸ್ತೆಯು ಭಾಗಶ: ಕುಸಿದಿರುತ್ತದೆ, ಇದರಿಂದಾಗಿ ಸಾರ್ವಜನಿಕರ ಹಾಗೂ ವಾಹನ ಸಂಚಾರಕ್ಕೆ ಅಡಚಣೆ ಉಂಟಾಗಿ ಪದೇ ಪದೇ ದೂರುಗಳು ಬಂದಿರುತ್ತದೆ. ಆದ್ದರಿಂದ ಈ ತಕ್ಷಣ ಕೂಡಲೇ WMM ಪದರವನ್ನು ಹಾಕಿ ವೈಜ್ಞಾನಿಕವಾಗಿ ನಿರ್ವಹಿಸಿ ಸಾರ್ವಜನಿಕರ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳಿಗೆ ಸೂಚಿಸಿದರು.<br>➢ ವಿವಿಧ ಭಾಗಗಳಲ್ಲಿ ಮ್ಯಾನ್ ಹೋಲ್ ಓವರ್ ಪಲ್ಲೋ ಮತ್ತು ಬ್ಲಾಕೇಜ್ ಆಗುತ್ತಿರುವುದನ್ನು ಸರಿಪಡಿಸಲು ಕೋರಿದ್ದು, ಅದರಂತೆ ಕೂಡಲೇ ಕ್ರಮ ಕೈಗೊಳ್ಳಲು ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.<br>➢ ಶೋಭಾ ಮ್ಯಗನೋಲಿಯ Appartment ರಲ್ಲಿ ಕುಡಿಯುವ ನೀರಿನ ಸಂಪರ್ಕವನ್ನು ಸಮರ್ಪಕವಾಗಿ ನಿರ್ವಹಿಸಲು RWA ರವರು ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಬಿಯಂತರರು (AEE / AE-BWSSB) |
| **III. ಬೇಸ್ಕಾಂ (BESCOM)** | | |
| 1 | ಗುರಪ್ಪನಪಾಳ್ಯದ ವಿವಿಧ ಪ್ರದೇಶಗಳಲ್ಲಿ ವಿದ್ಯುತ್ ಸಮಸ್ಯೆಯನ್ನು ಹಾಗೂ ವಿದ್ಯುತ್ ಕಂಬಗಳನ್ನು ಅಳವಡಿಸಲು ಹಾಗೂ ದುರಸ್ತಿ ಕೆಲಸಗಳಿಗಾಗಿ ರಸ್ತೆಗಳನ್ನು ಅಗೆದಿದ್ದು ಅದನ್ನು ಸಮರ್ಪಕವಾಗಿ ಮುಚ್ಚದೇ ಹಾಗೇ ಬಿಟ್ಟಿರುವುದನ್ನು ಈ ಕೂಡಲೇ ಸರಿಪಡಿಸಲು ನೀಡಿರುವ ದೂರಿಗೆ ಸ್ಪಂದಿಸಲು ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು / ಸಹಾಯಕ ಅಬಿಯಂತರರು (AEE / AE-BWSSB) |
| **IV. ತೋಟಗಾರಿಕಾ ಇಲಾಖೆ (Horticulture Department)** | | |
| 1 | ಮಾರುತಿ ಬಡಾವಣೆಯ ಪಾರ್ಕ್‌ಗಳನ್ನು ಇನ್ನು ಹೆಚ್ಚಾಗಿ ಸ್ವಚ್ಛವಾಗಿಡಲು ತಿಳಿಸಲಾಯಿತು. | ಅಧೀಕ್ಷಕರು (ತೋಟಗಾರಿಕೆ) |

| | | |
|---|---|---|
| **V. ಕಾಮಗಾರಿ ಇಲಾಖೆ (Engineering Department)** | | |
| 1 | ಬಿಸ್ಮಿಲ್ಲಾನಗರ ಸುತ್ತಮುತ್ತಲಿನ ಪ್ರದೇಶದಲ್ಲಿ ಈಗಾಗಲೇ ಡೆಬ್ರೀಸ್ ಮತ್ತು ಶೋಲ್ಡರ್ ಡ್ರೆöÊನ್ ಅನ್ನು ಸ್ವಚ್ಛಗೊಳಿಸಲಾಗಿದ್ದು, ಕೆಲವುಕಡೆ ಎತ್ತಿರುವ ಹೂಳು ಸ್ಥಳದಲ್ಲಿ ಬಿಟ್ಟಿರುವುದನ್ನು ತೆರೆವುಗೊಳಿಸಲು ಹಾಗೂ ವಾರ್ಡ್ ವ್ಯಾಪ್ತಿಯ ವಿವಿಧ ಪ್ರದೇಶಗಳಲ್ಲಿ ರಸ್ತೆ ಗುಂಡಿಗಳನ್ನು ತಿಂಗಳ ಕೊನೆಯ ಹಂತದಲ್ಲಿ ಮುಕ್ತಾಯಗೊಳಿಸಲು | ಸಹಾಯಕ ಕಾರ್ಯಪಾಲಕ ಅಭಿಯಂತರರು / (ಸ.ಅ.ವಾರ್ಡ್–171) (ಕಾಮಗಾರಿ ಇಲಾಖೆ) |
| 2 | ಮಾನ್ಯ ಶಾಸಕರು ಜಯನಗರ ವಿಧಾನಸಭಾ ಕ್ಷೇತ್ರ ರವರ ಅಧ್ಯಕ್ಷತೆಯಲ್ಲಿ ದಿ:16.04.2022 ರಂದು ಸಭೆಯನ್ನು ಕರೆಯಲಾಯಿತು. ವಾರ್ಡ್ 171 ಗುರಪ್ಪರಪಾಳ್ಯ ರಸ್ತೆಗಳ ಡಾಂಬರಿಕರಣ ಹಾಗೂ ಟೆಂಡರ್‌ಗಳ ಮಾಹಿತಿಯನ್ನು ಕೋರುರಯತ್ತಾರೆ. ಬಿಸ್ಮಿಲ್ಲಾ ನಗರದಲ್ಲಿ ಮಳೆ ಗುಂಡಿಗಳನ್ನು [illegible] | ಸಹಾಯಕ ಕಾರ್ಯಪಾಲಕ ಅಭಿಯಂತರರು / (ಸ.ಅ.ವಾರ್ಡ್–171) (ಕಾಮಗಾರಿ ಇಲಾಖೆ) |
| **VI. ಪೊಲೀಸ್ ಇಲಾಖೆ (ಸಂಚಾರ) (Traffic Police)** | | |
| 1 | ಗುರಪ್ಪನಪಾಳ್ಯ ಮಾರುಕಟ್ಟೆ, ಹಾಗೂ ಅಶ್ವಥಕಟ್ಟೆ ಟಿಂಬರ್‌ಗಳಿಗಳಲ್ಲಿ 2 ಬಿದಿಯಲ್ಲಿ ವಾಹನ ನಿಲುಗಡೆಯಿಂದ ಸಾರ್ವಜನಿಕರ ಸಂಚಾರಕ್ಕೆ ಅಡಚಡಣೆ ಉಂಟಾಗುತ್ತಿದ್ದು, ಮತ್ತು ಸದರಿ ರಸ್ತೆಯಲ್ಲಿ ಸುಮಾರು ವ್ಯಾಪಾರಿಗಳ ವಾಹನಗಳು ರಸ್ತೆ ಬಿದಿಯಲ್ಲಿ ನಿಲುಗಡೆ ಮಾಡುವುದನ್ನು ತಡೆಯಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಕೋರಿದರು. | ಸಂಚಾರ ಪೊಲೀಸ್ ಇಲಾಖೆಯವರು ಕೂಡಲೇ ಕ್ರಮ ಕೈಗೊಳ್ಳುವುದು (ಮೈಕೊಲೇಜೌಟ್ ಮತ್ತು ತಾವರೆಕೆರೆ) |
| 2 | ಮುನಿಚನ್ನಪ್ಪ ಕಲ್ಯಾಣ ಮಂಟಪ ಟ್ಯಾಂಕ್ ಬಂಡರಸ್ತೆ ಹಾಗೂ ಮಾರುತಿ ಲೇಔಟ್ ಸುತ್ತಮುತ್ತಲು ವಾಹನ ನಿಲ್ಲುಗಡೆಯನ್ನು ತೆರೆವುಗೊಳಿಸಲು ಸೂಚಿಸಿರುತ್ತಾರೆ | |
| **VII. ಪೋಲಿಸ್ ಇಲಾಖೆ (ಕಾ & ಸು) (LAW & ORDER)** | | |
| 1 | ವಾರ್ಡ್ 171– ಗುರಪ್ಪನ ಪಾಳ್ಯ ವಿವಿಧ ಪ್ರದೇಶಗಳಲ್ಲಿ ಸರ ಕಳ್ಳತನ ಮತ್ತು ಮೊಬೈಲ್ ಕಳ್ಳತನ, ದರೋಡೆ, ಚಾಕು ತೋರಿಸಿ ಬೆದರಿಕೆ ಹೊಡ್ಡುವುದು. ರಾತ್ರಿವೇಳೆ ಬೈಕ್ಗಳ ಕಳ್ಳತನ ನಡೆಯುತ್ತೀದ್ದು, ಅದನ್ನು ನಿಯಂತ್ರಿಸಲು ಸ್ಥಳಿಯವರು ಕೋರಿದರು. | ಪೋಲೀಸ್ ಇಲಾಖೆ (ಮೈಕೊ ಲೇಔಟ್) ಕ್ರಮಕ್ಕಾಗಿ ಹಾಗೂ ಪ್ರತಿ ಸಭೆಗೂ ಕಡ್ಡಾಯವಾಗಿ ಹಾಜರಾಗುವಂತೆ ಕೋರಲಾಗಿದೆ. |

**<u>ಸೂಚನೆ:</u>**

1. ಎಲ್ಲಾ ವಾರ್ಡಿಗೆ ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಮಿತ್ರರಲ್ಲಿ ನನ್ನ ಕಳಕಳಿಯ ಮನವಿ ಏನೆಂದರೇ ದಯಮಾಡಿ ಸಭೆಯಲ್ಲಿ ತೆಗೆದುಕೊಂಡ ತೀರ್ಮಾಣಗಳ ಹಾಗೂ ಸಾರ್ವಜನಿಕ ದೂರುಗಳನ್ನು ತಮಗೆ ಗೂಗಲ್ ಸ್ಪ್ರೇಡ್ ಶೀಟ್(ಐಡಿ:) ನಲ್ಲಿ ನಮೂದಿಸಲಾಗುವುದು ಹಾಗು ತಮಗೆ ಪ್ರವೇಶಕ್ಕೆ ಅನುಮತಿ ನೀಡಲಾಗುವುದು. ತಾವುಗಳು ದಯವಿಟ್ಟು ಈ ಕಛೇರಿಗೆ ನೇರವಾಗಿ ಅಥವಾ ಗೂಗಲ್ ಸ್ಪ್ರೇಡ್ ಶೀಟ್‌ನಲ್ಲಿ ಛಾಯಚಿತ್ರದ ಸಮೇತ ಅನುಪಾಲನಾ ವರದಿಯನ್ನು ಸಲ್ಲಿಸಲು ಕೋರಿದ. ಮುಂದಿನ ಸಭೆಯನ್ನು ದಿನಾಂಕ:19.11.2022ರಂದು ನಡೆಸಲಾಗುವುದು ಅದರ ಒಳಗಾಗಿ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ವಹಿಸಿ, ಕಾರ್ಯದರ್ಶಿ ವಾರ್ಡ್ ಸಮಿತಿ ಇವರಿಗೆ ಅನುಪಾಲನಾ ವರದಿಯನ್ನು ನೀಡಲು ಸೂಚಿಸಿ ಸಭೆಯನ್ನು ವಂದನಾರ್ಪಣೆಯೊಂದಿಗೆ ಮುಕ್ತಾಯಗೊಳಿಸಲಾಯಿತು.
2. ಮತದಾರರ ಗುರುತಿಗೆ ಆಧಾರ ಸಂಖ್ಯೆಯನ್ನು ಜೋಡನೆ ಮಾಡಲು ಮತ್ತು ದೃಢೀಕರಿಸಲು ಸ್ವಯಂಪ್ರೇರಿತವಾಗಿ ಮತದಾರರಿಂದ ಆಧಾರ್ ದತ್ತಾಂಶವನ್ನು ಸಂಗ್ರಹಣೆ ಮಾಡುವ ಕಾರ್ಯಕ್ರಮದ ಕುರಿತು ಚರ್ಚಿಸುವ ಬಗ್ಗೆ RWAS, NGO'S ಹಾಗೂ ಇತರೆ ಸಾರ್ವಜನಿಕರಿಗೆ ತಿಳಿಸಲಾಯಿತು.
3. ಹೋಟಲ್ ಗಳು ಮಾಂಸದ ಅಂಗಡಿಗಳು, ಮೆಡಿಕಲ್ಸ್ ಅಂಗಡಿಗಳನ್ನು ಸ್ವಚವಾಗಿ ಇಡಲು ಆರೋಗ್ಯ ಪರಿವೀಕ್ಷಕರಿಗೆ ತಿಳಿಸಲಾಯಿತು.
4. ವಾರ್ಡ್ ಬಡ್ಜೆಟ್ ಬಗ್ಗೆ ರಸ್ತೆ ಅಗಲೀಕರಣ, ಪಾದಚಾರಿ ಮಾರ್ಗಗಳು, ಪಾರ್ಕ್ಸ್/ಆಟದ ಮೈದಾನ, ಸಾರ್ವಜನಿಕ ಶೌಚಾಲಯದ ಬಗ್ಗೆ ಚರ್ಚಿಸಲಾಯಿತು. ವಾರ್ಡ್-171ಕ್ಕೆ ಸಂಬಂದಿಸಿಂತೆ POW ಪ್ರಕ್ರಿಯೆಗಳ ಬಗ್ಗೆ ಚರ್ಚಿಸಲಾಯಿತು, ಜಂಡ್‌ಗಳ್ಳಿ ರಸ್ತೆಗಳ ದುರಸ್ತೆಗಳನ್ನು ಸರಿಪಡಿಸಲು 'ಇ' ಕ್ರಾಸ್ ರಸ್ತೆಯ ಸೀಮೆಂಟ್ ರಸ್ತೆ ಸರಿಪಡಿಸುವಿಕೆಯ ಬಗ್ಗೆ CULVERTS and Disilting of Drains ಬಗ್ಗೆ ಮಾರುತಿ ಬಡಾವಣೆ ಸುತ್ತಮುತ್ತಲು, 8ನೇ ಮುಖ್ಯರಸ್ತೆ ಹಳೆ ಗುರಪ್ಪನಪಾಳ್ಯ ಕಾರ್ಯಕ್ರಮವನ್ನು ಶೀಘ್ರದಲ್ಲಿ ಕ್ರಮವಹಿಸಲು AEE ಜಯನಗರ ರವರಿಗೆ ತಿಳಿಸಲಾಯಿತು. ಪಾದಚಾರಿಗಳ ರಸ್ತೆಗಳ ದುರಸ್ತಿಯನ್ನು ಮಾರುತಿ ಬಡಾವಣೆ 9ನೇ ಮುಖ್ಯರಸ್ತೆ 10ನೇ ಮುಖ್ಯರಸ್ತೆ ಸುತ್ತಮುತ್ತಲು ಸರಿಪಡಿಸಲು AEE ರವರಿಗೆ ತಿಳಿಸಲಾಯಿತು.
5. ಮಳೆ ಪರಿಹಾರದ ಬಿಲ್‌ಗಳನ್ನು ಕೂಡಲೇ ಮೇಲ್ ಅಧಿಕಾರಿಗಳ ಗಮನಕ್ಕೆ ಮಂಡಿಸಲು ತಿಳಿಸಿದೆ.
6. ಮತದಾರರ ಗುರುತಿಗೆ ಆಧಾರ ಸಂಖ್ಯೆಯನ್ನು ಜೋಡನೆ ಮಾಡಲು ಮತ್ತು ದೃಢೀಕರಿಸಲು ಸ್ವಯಂಪ್ರೇರಿತ ಆಧಾರದ ಮೇಲೆ ಮತದಾರರಿಂದ ನಮೂನೆ-6ಬಿ ನ್ನು ಸಂಗ್ರಹಿಸಲು ನಿರ್ದೇಶನವನ್ನು ಹೊರಡಿಸಿದ್ದು ಎಲ್ಲಾ ಮತಗಟ್ಟೆಗಳಲ್ಲಿ ದಿನಾಂಕ: 12.11.2022 (ಶನಿವಾರ), 20.11.2022 (ಭಾನುವಾರ), 03.12.2022 (ಶನಿವಾರ) ಮತ್ತು 04.12.2022 (ಭಾನುವಾರ) ಗಳಂದು ವಿಶೇಷ ಶಿಬಿರಗಳನ್ನು ಏರ್ಪಡಿಸಿರುವುದನ್ನು ತಿಳಿಸಲಾಯಿತು.
7. ಸಭೆಯ ದಿನಾಂಕ ಬದಲಾದಲ್ಲಿ ತಮಗೆ ಮುಂಗಡವಾಗಿ ತಿಳಿಸಲಾಗುವುದು.

ವಂದನೆಗಳೊಂದಿಗೆ ಕಾರ್ಯದರ್ಶಿಗಳು ಸಭೆಯನ್ನು ಮುಕ್ತಾಯಗೊಳಿಸಿದರು.

**CzsÀåPÀëgÀÄ ºÁUÀÆ**

**£ÉÆÃqÀ¯ï C¢üPÁj**

**ªÁqïð-171**

**UÀÄgÀ¥Àà£À¥Á¼Àå**

§È°Àvï ¨ÉAUÀ¼ÀÆgÀÄ

ªÀÄ°Á£ÀUÀgÀ ¥Á°PÉ

ಅಧಿಕಾರಿಗಳ ಮಾಹಿತಿಗಾಗಿ:-

1. ಮಾನ್ಯ ಜಂಟಿ ಆಯುಕ್ತರು (ದಕ್ಷಿಣ) ರವರ ಅವಹಾಹನೆಗಾಗಿ ಮಂಡಿಸಿದೆ.
2. ಸಹಾಯಕ ಕಾರ್ಯಪಾಲಕ ಅಭಿಯಂತರರು (BWSSB) ರವರ ಮಾಹಿತಿಗಾಗಿ ಕಳುಹಿಸಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು (BESCOM) ರವರ ಮಾಹಿತಿಗಾಗಿ ಕಳುಹಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು (ವಿದ್ಯುತ್) ರವರ ಮಾಹಿತಿಗಾಗಿ ಕಳುಹಿಸಿದೆ.
5. ಕಛೇರಿ ಕಡತಕ್ಕೆ.